# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ -145ರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಹೊಂಬೇಗೌಡನಗರ ವಾರ್ಡ್-145 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀಮತಿ. ಲಕ್ಷ್ಮೀದೇವಿ ಆರ್. ಉಪ ಆಯುಕ್ತರು ಕಂದಾಯ (ದಕ್ಷಿಣ), ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯವರ ಅಪ್ಪಣೆ ಮೇರೆಗೆ ದಿನಾಂಕ:23/12/2021ರ ಗುರುವಾರದಂದು ಮಧ್ಯಾಹ್ನ 3.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಗೆ ಹಾಜರಾಗಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರ ಅಧ್ಯಕ್ಷತೆಯೊಂದಿಗೆ ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:-**

1. ಉಪ ಆಯುಕ್ತರು (ದಕ್ಷಿಣ) ಹಾಗೂ ವಾರ್ಡ್ 145ರ ನೋಡಲ್ ಅಧಿಕಾರಿ.
2. ಸಹಾಯಕ ಅಭಿಯಂತರರು ವಾರ್ಡ್-145
3. ಸಹಾಯಕ ಇಂಜಿನಿಯರ್ (ಬೆಸ್ಕಾಂ)
4. ಸಹಾಯಕ ಇಂಜಿನಿಯರ್ (BWSSB)
5. ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್-145.
6. ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-145.
7. ವಿಲ್ಸನ್‌ಗಾರ್ಡನ್ ಪೊಲೀಸ್ ಠಾಣೆ ಕಾನೂನು ಸುವ್ಯವಸ್ಥೆ ವಾರ್ಡ್ 145.
8. ನಾಗರೀಕ ಕಲ್ಯಾಣ ಸಂಘದ ಸದಸ್ಯರು ಮತ್ತು ಸಾರ್ವಜನಿಕರು.

**ಸಭೆಗೆ ಗೈರು ಹಾಜರಾದ ಇಲಾಖೆಗಳು:-**

1. ತೋಟಗಾರಿಕೆ ಇಲಾಖೆ, ಬಿಬಿಎಂಪಿ ಅಧಿಕಾರಿಗಳು ವಾರ್ಡ್ 145.
2. ಪೊಲೀಸ್ ಇಲಾಖೆ ಅಧಿಕಾರಿಗಳು (ಕಾನೂನು ಸುವ್ಯವಸ್ಥೆ) ಆಡುಗೋಡಿ.
3. ಕಿರಿಯ ಇಂಜಿನಿಯರ್ (ವಿದ್ಯುತ್ ವಿಭಾಗ ಬಿಬಿಎಂಪಿ)
4. ವಿಲ್ಸನ್‌ಗಾರ್ಡನ್ ಪೊಲೀಸ್ ಠಾಣೆ ಸಂಚಾರ ವಾರ್ಡ್ 145.

*********

1. ವಿಲ್ಸನ್‌ಗಾರ್ಡನ್ 8ನೇ ಅಡ್ಡರಸ್ತೆಯಲ್ಲಿ ಪಾದಚಾರಿ ರಸ್ತೆಯ ಮೇಲೆ ಹಾಕಿರುವ ಚೇರ್‌ಗಳನ್ನು ತೆರವುಗೊಳಿಸಲು ಸಭೆಯಲ್ಲಿ ಕೋರಿದರು ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ವಾರ್ಡ್ ಇಂಜಿನಿಯರ್ ರವರಿಗೆ ಅಧ್ಯಕ್ಷರು ಸೂಚಿಸಿದರು.



Scanned with CamScanner

2. ವಿಲ್ಸನ್‌ಗಾರ್ಡನ್ ಹೆಚ್. ಸಿದ್ದಯ್ಯ ರಸ್ತೆಯ ಅಗಡಿ ಆಸ್ಪತ್ರೆ ಮುಂಭಾಗದ ಪಾದಚಾರಿ ರಸ್ತೆಯ ಮೇಲೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಪೈಪ್‌ಗಳನ್ನು ಶೇಖರಿಸಿದ್ದು, ತೆರವುಗೊಳಿಸಲು ಸಾರ್ವಜನಿಕರು ಕೋರಿದರು– ಸದರಿ ಪೈಪ್‌ಗಳನ್ನು ತೆರವುಗೊಳಿಸಿ BWSSB ಅಧಿಕಾರಿಗಳಿಗೆ ಅಧ್ಯಕ್ಷರು ಸೂಚಿಸಿದರು.

3. ಲಕ್ಕಸಂದ್ರ 8ನೇ ಮುಖ್ಯರಸ್ತೆಯ 15ನೇ ಅಡ್ಡರಸ್ತೆಯಲ್ಲಿ ಮರದ ಕೊಂಬೆಗಳನ್ನು ತೆರವುಗೊಳಿಸಲು ಶ್ರೀ. ದಿನೇಶ್ (ಮೊ:9449271613) ರವರು ಕೋರಿದರು–ಸಂಬಂಧಿಸಿದ ವಿಷಯದ ಬಗ್ಗೆ ಅರಣ್ಯ ಇಲಾಖೆ, ಬಿಬಿಎಂಪಿ ರವರು ಕ್ರಮ ಕೈಗೊಳ್ಳಲು ಅಧ್ಯಕ್ಷರು ಸೂಚಿಸಿದರು.

4. ವಾರ್ಡ್ ವ್ಯಾಪ್ತಿಯಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾಗಳ ವಿವಿರಗಳನ್ನು ನೀಡಲು ಸಭೆಯಲ್ಲಿ ಕೋರಿದರು–ಸಂಬಂಧಿಸಿದಂತೆ ವಿವರಗಳನ್ನು ನೀಡಲು ವಾರ್ಡಿನ ಸಹಾಯಕ ಅಭಿಯಂತರರಿಗೆ ಅಧ್ಯಕ್ಷರು ಸೂಚಿಸಿದರು.

5. ಚಿನ್ನಯ್ಯನಪಾಳ್ಯ ಹರಿಲಕ್ಷ್ಮೀ ಥಿಯೇಟರ್ ಪಕ್ಕದಲ್ಲಿ ಇರುವ ಕಸದ ಸಂಗ್ರಹಣಾ ಕೇಂದ್ರವನ್ನು ಸ್ಥಳಾಂತರಿಸರು ಸಾರ್ವಜನಿಕರು ಕೋರಿದರು– ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ಕಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಅಧ್ಯಕ್ಷರು ಸೂಚಿಸಿದರು.

6. ವಿಲ್ಸನ್‌ಗಾರ್ಡನ್ 9ನೇ ಅಡ್ಡರಸ್ತೆಯಲ್ಲಿ ಈಗಾಗಲೇ ಕೈಗೊಂಡಿರುವ ಮಳೆನೀರು ಚರಂಡಿ ಕಾಮಗಾರಿಯನ್ನು ಹೊಸೂರು ರಸ್ತೆಯವರೆಗೆ ಮುಂದುವರೆಸಲು ಸಭೆಯಲ್ಲಿ ಕೋರಿದರು. ಸದರಿ ವಿಷಯದ ಬಗ್ಗೆ ವಾರ್ಡಿನ ಇಂಜನಿಯರ್ ರವರು ಮಾತನಾಡಿ ಹೊಸೂರು ರಸ್ತೆಯವರೆಗೂ ಚರಂಡಿ ಕಾಮಗಾರಿಯನ್ನು ಮುಂದುವರೆಸುವುದಾಗಿ ಸಭೆಗೆ ತಿಳಿಸಿದರು.

7. ಹೊಸೂರು ಮುಖ್ಯರಸ್ತೆಯ ಲಕ್ಕಸಂದ್ರ ಬಳಿ ಇರುವ ಮೇಲು ಸೇತುವೆಯ ಲಿಫ್ಟ್‌ಗಳು ಕಾರ್ಯನಿರ್ವಹಿಸುತ್ತಿಲ್ಲ. ಹಾಗೂ ಅವುಗಳು ಯಾವುದೇ ಸೆಕ್ಯುರಿಟಿ ಇಲ್ಲದೇ ಸ್ವಚ್ಛತೆಯನ್ನು ಕಾಪಾಡಿಲ್ಲದಿರುವುದರ ಬಗ್ಗೆ ವಾರ್ಡಿನ ನಾಗರೀಕರು ದೂರಿದರು. ಸದರಿ ವಿಷಯವು ರಸ್ತೆ ಮೂಲಭೂತ ಸೌಕರ್ಯ, ಬಿಬಿಎಂಪಿ ಮುಖ್ಯ ಕಛೇರಿ ರವರ ವ್ಯಾಪ್ತಿಗೆ ಒಳಪಟ್ಟಿದ್ದು, ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಲಾಗುವುದೆಂದು ಅಧ್ಯಕ್ಷರು ಸಭೆಗೆ ತಿಳಿಸಿದರು.



Scanned with CamScanner

8. ವಾರ್ಡ್ ವ್ಯಾಪ್ತಿಯ ಕಾಮಗಾರಿಗಾಗಿ ರೂ. 60.00 ಲಕ್ಷಗಳನ್ನು ಕಾರ್ಯಕ್ರಮ ಪಟ್ಟಿಯಲ್ಲಿ ಕೈಗೊಂಡಿದ್ದು, ಸದರಿ ಕಾಮಗಾರಿಗಳ ಬಗ್ಗೆ ಸಭೆಗೆ ವಿವರಣೆ ನೀಡಲು ಕೋರಿದರು. ವಾರ್ಡಿನ ಅಭಿಯಂತರರು ಮಾತನಾಡಿ ರೂ. 20.00 ಲಕ್ಷದ ರಸ್ತೆ ಗುಂಡಿ ಮುಚ್ಚುವ ಕಾಮಗಾರಿಯು ಈಗಾಗಲೇ ಪ್ರಗತಿಯಲ್ಲಿರುತ್ತದೆ. ಹಾಗೂ ಬೋರ್‌ವೆಲ್ ನಿರ್ಮಾಣ, ಚರಂಡಿ ದುರಸಿಕಾಮಗಾರಿಯ ಟೆಂಡರ್‌ಗಳನ್ನು ಕರೆಯಲು ಕಡತಗಳನ್ನು ಸಲ್ಲಿಸಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

9. ವಿಲ್ಸನ್‌ಗಾರ್ಡನ್ 9ನೇ ಅಡ್ಡರಸ್ತೆಯಲ್ಲಿ ಸ್ವಚ್ಛತೆ ಕಾಪಾಡುತ್ತಿಲ್ಲವೆಂದು ಶ್ರೀಮತಿ. ಜಯಲಕ್ಷ್ಮಿ ರವರು ದೂರಿದರು–ಸದರಿ ವಿಷಯದ ಬಗ್ಗೆ ಅಧ್ಯಕ್ಷರು ಮಾತನಾಡಿ ಪ್ರತಿ ದಿವಸ ವಾರ್ಡಿನ ಎಲ್ಲಾ ರಸ್ತೆಗಳನ್ನು ಸ್ವಚ್ಛಗೊಳಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.

ಮೇಲಿನ ಈ ಎಲ್ಲಾ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ಸಂಬಂಧಟ್ಟ ಇಲಾಖಾವಾರು ಸಮನ್ವಯ ಸಾಧಿಸಿಕೊಂಡು ನಿರ್ವಹಿಸಲು ಎಲ್ಲಾ ಸಿಬ್ಬಂಧಿ ವರ್ಗದವರು ಒಂದುಗೂಡಿ ಈ ಕಾರ್ಯದಲ್ಲಿ ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ಹೇಳುತ್ತಾ ಸಭೆ ಮುಕ್ತಾಯಗೊಳಿಸಿದರು.

| | |
|---|---|
| ಕಾರ್ಯದರ್ಶಿ & ಸಹಾಯಕ ಅಭಿಯಂತರರು | ಅಧ್ಯಕ್ಷರು & ನೋಡಲ್ ಅಧಿಕಾರಿ |
| ವಾರ್ಡ್ ಸಂಖ್ಯೆ – 145 | ವಾರ್ಡ್ ಸಂಖ್ಯೆ – 145 |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |



Scanned with CamScanner